pected to approach a Member of Parliament or of a State Legislature for sponsoring his individual case.

ಕುಂದಾಪುರ ಠಾಣಾ ವ್ಯಾಪ್ತಿಯ ಕ್ರೈಸ್ತ ಮತಾಂತರದ ಬಗ್ಗೆ

ಕುಂದಾಪುರ ಠಾಣಾ ವ್ಯಾಪ್ತಿಯ ಕ್ರೈಸ್ತ ಮತಾಂತರದ ಬಗ್ಗೆ

ಸಂಖ್ಯೆ : 52 (178) ಶ್ರೀನಿವಾಸ್ ನಿಗ್ಲಿ (ನಾಮಾಂಕಿತ)

ಮಾನ್ಯ ಗೃಹ, ಕಾನೂನು, ನ್ಯಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

1. Whether the Government is aware that the Catholic Priest of Katkare Carmel Ashrama and another person of Koteshwara Kundapura were assaulted by some anti social elements when they were on their way to hospital?

2. if so what action the Governmetn has taken to apprehend the culptrits:

3. How many were arrested on wht changes they were booked.

4) What action government is taking to protect the peace loving minority community seminary people whose contribution to the society in the form of Education, health sector and social services are praiseworthy.

ಶ್ರೀ ಎಂ.ಪಿ.ಪ್ರಕಾಶ್ ಮಾನ್ಯ ಗೃಹ, ಕಾನೂನು, ನ್ಯಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು

1) ದಿನಾಂಕ : 25-06-2007 ರಂದು 13-10 ಗಂಟೆಗೆ ಕುಂದಾಪುರ ಠಾಣಾಧಿಕಾರಿಯವರಿಗೆ ಬಂದ ಪಿರ್ಯಾದಿಯಂತೆ ಅದೇ ದಿನ ಬೆಳಿಗ್ಗೆ 9-

30 ಗಂಟೆಗೆ ಕ್ಯಾಥೋಲಿಕ್ ಗುರು ಸಿಲ್ವೆಸ್ಟಾರ್ (36), ಕಾಟಕೆರೆ, ಕಾರ್ಮೆಲ್ ಆಶ್ರಮ, ಕುಂದಾಪುರ ರವರು ಕೋಟೇಶ್ವರದ ಸರ್ಜನ್ ಆಸ್ಪತ್ರೆಯಲ್ಲಿರುವಾಗ ಹಿಂದೂಗಳನ್ನು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಿಸಿರುತ್ತಾರೆಂಬ ಕಾರಣದಿಂದ 4 ಮಂದಿ ಸಾಧಾರಣ ಹಾಗೂ ಗಂಭೀರ ಗಾಯವಾಗುವಂತೆ ಹಲ್ಲೆ ನಡೆಸಿರುತ್ತಾರೆ. ಈ ಬಗ್ಗೆ ಕುಂದಾಪುರ ಪೊಲೀಸ್ ಠಾಣೆಯಲ್ಲಿ ಅಪರಾಧ ಕ್ರ.ಸಂ. 216/2007 ಕಲಂ : 323, 325, 506 ಜೊತೆಗೆ 34 ಐಪಿಸಿಯಂತೆ ಪ್ರಕರಣ ದಾಖಲಿಸಿ ಕ್ರಮ ಕೈಗೊಳ್ಳಲಾಗಿರುತ್ತದೆ. ಕೆಳಗಿನ 4 ಜನವರು ಅಪಾದಿತರಾಗಿರುತ್ತಾರೆ.

(1) ರಾಮಣ್ಣಸೆಟ್ಟಿ (43) ತಂದೆ ದಿ: ತಿಮ್ಮನ್ನಸೆಟ್ಟಿ, ವಾಸ ಅಂಕದಕಟ್ಟೆ, ಕುಂದಾಪುರ.

(2) ರಾಜು (26) ತಂದೆ ನಾರಾಯಣ ಮೊಗವೀರ, ವಾಸ ಅಂಕದಕಟ್ಟೆ, ಕುಂದಾಪುರ.

(3) ಪ್ರಶಾಂತ್ (25) ತಂದೆ ರಾಮ ಮೊಗವೀರ, ವಾಸ ಅಂಕದಕಟ್ಟೆ, ಕುಂದಾಪುರ.

(4) ಸುಧಾಕರ (28) ತಂದೆ ರಾಮ ದೇವಾಡಿಗ, ವಾಸ ಅಂಚೆ ಕಛೇರಿ ಹತ್ತಿರ, ಹಂಗ್ಲೂರು ಗ್ರಾಮ, ಹಂಗ್ಲೂರು.

2) ಎಲ್ಲಾ 4 ಜನ ಆರೋಪಿತರನ್ನು ದಿನಾಂಕ : 26-06-2007 ರಂದು ಬಂಧಿಸಿ ಮಾನ್ಯ ಎ.ಸಿ.ಜೆ. ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕುಂದಾಪುರ ರವರ ಮುಂದೆ ಹಾಜರುಪಡಿಸಲಾಗಿದೆ.

3) ಈ 4 ಜನ ಆರೋಪಿತರನ್ನು ಬಂಧಿಸಿ ಅವರ ವಿರುದ್ಧ ಸಾದಾ ಮತ್ತ ತೀವ್ರತರದ ಹಲ್ಲೆ ನಡೆಸಿ ಕೊಲೆ ಬೆದರಿಕೆ ಹಾಕಿರುವ ಬಗ್ಗೆ ಆರೋಪಿಸಿ ಕಲಂ: 323,325, 506 ಜೊತೆಗೆ 34 ಐಪಿಸಿಯಂತೆ ಕ್ರಮ ಕೈಗೊಳ್ಳಲಾಗಿದೆ.

4) ಎಲ್ಲಾ ಆರೋಪಿಗಳು ಭಜರಂಗದಳದ ಕಾರ್ಯಕರ್ತರಾಗಿರುತ್ತಾರೆ.

5) ಕೋಮುಗಲಭೆ ನಡೆದ ಸಂದರ್ಭದಲ್ಲಿ ಶೀಘ್ರಗತಿಯಲ್ಲಿ ಸ್ಪಂದಿಸಿ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತರಲಾಗುತ್ತಿದೆ. ಕೋಮುಗಲಭೆಗಳ ಸಂದರ್ಭದಲ್ಲಿ ಪ್ರಕರಣಗಳನ್ನು ದಾಖಲಿಸಿ ತನಿಖೆಯನ್ನು ನಡೆಸಿ ಕಿಡಿಗೇಡಿಗಳ ಮೇಲೆ ಕಟ್ಟುನಿಟ್ಟಿನ

ಕ್ರಮಗಳನ್ನು ಜರುಗಿಸಲಾಗುತ್ತಿದೆ. ಮತೀಯ ಗಲಭೆಕೋರರ ಪಟ್ಟಿಯನ್ನು ನಿರ್ವಹಿಸುತ್ತಿದ್ದು ಅವರ ವಿರುದ್ಧ ಮುಂಜಾಗ್ರತಾ ಕ್ರಮವಾಗಿ ಸೂಕ್ತ ಕಾನೂನು ಪ್ರತಿಬಂಧಕ ಕ್ರಮಗಳನ್ನು ಜರುಗಿಸಾಲಗುತ್ತಿದೆ. ಅಂತಹ ವ್ಯಕ್ತಿಗಳ ಮೇಲೆ ಸೂಕ್ಷ್ಮ ನಿಗಾವಹಿಸಲಾಗುತ್ತಿದೆ.

ಪ್ರಶ್ನೆ ಸಂಖ್ಯೆ : 54 (180) ಶ್ರೀನಿವಾಸ್ ನಿಗ್ಲಿ (ನಾಮಾಂಕಿತ)

ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ಕಸ ಹಾಕಲು ಗುರುತಿಸಿರುವ ಜಾಗಗಳು ಯಾವುವು (ಪ್ರದೇಶಾವಾರು ವಿವರವನ್ನು ನೀಡಿ);

ಆ) ಪ್ರತಿದಿನ ಸಂಗ್ರಹವಾಗುವ ಕಸ ಎಷ್ಟು; (ಟನ್‌ವಾರು ವಿವರವನ್ನ ನೀಡಿ);

ಇ) ವಿದ್ಯುತ್ ಸಂಗ್ರಹ ಘಟಕಗಳನ್ನು ಸ್ಥಾಪಿಸುವ ಘಟಕಗಳ ಪೈಕಿ ಪುನರ್ ಉಪಯೋಗ ಘಟಕಗಳನ್ನು ಸ್ಥಾಪಿಸುವ ಉದ್ದೇಶ ಸರ್ಕಾರಕ್ಕಿದೆಯೇ;

ಈ) ಹಾಗಿದ್ದಲ್ಲಿ, ಯಾವ ಜಾಗಗಳಲ್ಲಿ ಯಾವ ಘಟಕಗಳು ಸ್ಥಾಪಿತವಾಗಿವೆ;

ಉ) ಇಲ್ಲದಿದ್ದರೆ, ಏಕೆ? ಈ ರೀತಿಯ ಘಟಕಗಳ ಪ್ರಸ್ತಾವನೆ ಅಥವಾ ಯೋಜನೆ ಇದೆಯೇ?

ಶ್ರೀ ಹೆಚ್.ಡಿ.ಕುಮಾರಸ್ವಾಮಿ ಮಾನ್ಯ ಮುಖ್ಯಮಂತ್ರಿ

ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಈ ಕೆಳಕಂಡ ಜಾಗಗಳನ್ನು ಕಸ/ಘನತ್ಯಾಜ್ಯ ವಸ್ತುಗಳ ವಿಲೇವಾರಿಗಾಗಿ ಗುರುತಿಸಲಾಗಿದೆ.

1. ಸರ್ವೆ ನಂ. 8, ಮಾವಳ್ಳಿಪುರ, ಹೆಸರಘಟ್ಟ ಹೋಬಳಿ, ಬೆಂಗಳೂರು.

2. ಕರ್ನಾಟಕ ಕಾಂಪೋಸ್ಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್, ಕೂಡ್ಲು, ಹೊಸೂರು ರಸ್ತೆ, ಬೆಂಗಳೂರು.